ಪಂಚ ರಾಜ್ಯ ಚುನಾವಣೆಯಲ್ಲಿ ರೈತರ ಮುನಿಸಿನ ಬಿಸಿ ತಾಗದಂತೆ ನೋಡಿಕೊಳ್ಳುವ ಪ್ರಯತ್ನದ ಬಜೆಟ್
ಬೆಂಬಲ ಬೆಲೆ ಅನುದಾನದಲ್ಲಿ ಯಥಾಸ್ಥಿತಿ । ತಂತ್ರಜ್ಞಾನ ಅಳವಡಿಕೆ ಮೂಲಕ ರೈತರ ಆದಾಯ ವೃದ್ಧಿಗೆ ಗಮನ

ಕೃಷಿ ಆಧುನೀಕರಣಕ್ಕೆ ಸ್ಟಾರ್ಟ್‌ಅಪ್

ಕೇಂದ್ರ ಸರಕಾರವು ಕೃಷಿಯಲ್ಲಿ ಡ್ರೋನ್‌ಗಳ ಬಳಕೆ, ರಾಸಾಯನಿಕಮುಕ್ತ ಸಹಜ ಕೃಷಿ ಪದ್ಧತಿ ಹಾಗೂ ಖಾಸಗಿ-ಸಾರ್ವಜನಿಕ ಸಹಭಾಗಿತ್ವದಲ್ಲಿ ರೈತರಿಗೆ ಡಿಜಿಟಲ್ ಮತ್ತು ಹೈಟೆಕ್ ಸೇವೆಗಳನ್ನು ಒದಗಿಸುವ ನಿಟ್ಟಿನಲ್ಲಿ ಉತ್ತೇಜನ ನೀಡಲಿದೆ. ಹಂತಹಂತವಾಗಿ ಕನಿಷ್ಠ ಬೆಂಬಲ ಬೆಲೆ (ಎಂಎಸ್‌ಪಿ) ರದ್ದಾಗಲಿದೆ ಎನ್ನುವ ರೈತ ಸಂಘಟನೆಗಳ ಅನುಮಾನವನ್ನು ನಿವಾರಿಸುವ ಪ್ರಯತ್ನವನ್ನೂ ಮುಂಗಡಪತ್ರದಲ್ಲಿ ಮಾಡಲಾಗಿದೆ.

ಏಪ್ರಿಲ್ 2022ರಿಂದ ಮಾರ್ಚ್ 2023ರ ಅವಧಿಯಲ್ಲಿ ಕನಿಷ್ಠ ಬೆಂಬಲ ಬೆಲೆ ವ್ಯವಸ್ಥೆ ಮೂಲಕ ಭತ್ತ ಹಾಗೂ ಗೋಧಿ ಖರೀದಿಸಲು 2.37 ಲಕ್ಷ ಕೋಟಿ ರೂ. ಮೀಸಲಿಡುವುದಾಗಿ ಘೋಷಿಸಲಾಗಿದೆ. ಎಂಎಸ್‌ಪಿ ಮೂಲಕ ಖರೀದಿಸಲಾದ ಬೆಳೆಗಳಿಗೆ ಪ್ರತಿಯಾಗಿ ರೈತರ ಖಾತೆಗಳಿಗೆ ಅನುದಾನವನ್ನು ನೇರವಾಗಿ ಜಮಾ ಮಾಡಲಾಗುತ್ತದೆ. ವಿಧಾನಸಭೆ ಚುನಾವಣೆ ನಡೆಯಲಿರುವ ಉತ್ತರ ಪ್ರದೇಶ ಹಾಗೂ ಪಂಜಾಬ್‌ಗಳಲ್ಲಿ ಭತ್ತ, ಗೋಧಿ ಪ್ರಮುಖ ಬೆಳೆಯಾಗಿರುವುದು ವಿಶೇಷ. ದೇಶಾದ್ಯಂತ 2021-22ನೇ ಸಾಲಿನಲ್ಲಿ 163 ಲಕ್ಷ ರೈತರಿಂದ 1,208 ಲಕ್ಷ ಟನ್ ಆಹಾರ ಧಾನ್ಯಗಳನ್ನು ಖರೀದಿಸಲಾಗಿದೆ.

ಕಿಸಾನ್ ಡ್ರೋನ್: ''ಸರ್ವರನ್ನೂ ಒಳಗೊಂಡ ಅಭಿವೃದ್ಧಿಯೇ ಕೇಂದ್ರ ಸರಕಾರದ ಗುರಿಯಾಗಿದೆ. ಅದರ ಭಾಗವಾಗಿಯೇ ಕೃಷಿಯಲ್ಲಿ ಕಿಸಾನ್ ಡ್ರೋನ್‌ಗಳ ಬಳಕೆಗೆ ಉತ್ತೇಜನ ನೀಡಲಾಗುವುದು. ಬೆಳೆ ಮೌಲ್ಯಮಾಪನ, ಭೂ ದಾಖಲೆಗಳ ಡಿಜಿಟಲೀಕರಣ ಮತ್ತು ಕೀಟನಾಶಕಗಳ ಸಿಂಪಡಣೆಗೆ ಈ ಡ್ರೋನ್‌ಗಳನ್ನು ಬಳಸುವುದು ಸರಕಾರದ ಆಶಯವಾಗಿದೆ,'' ಎಂದು ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಘೋಷಿಸಿದರು.

ಆಹಾರ ಉತ್ಪಾದನೆ ಸರಪಳಿ ಮೌಲ್ಯವರ್ಧನೆ ಆಶಯದಿಂದ ಕೃಷಿ ಸ್ಟಾರ್ಟ್‌ಅಪ್ ಮತ್ತು ಗ್ರಾಮೀಣ ಕೃಷಿ ಉದ್ಯಮಗಳ ಸ್ಥಾಪನೆಗೆ ಹಣಕಾಸು ಸೌಲಭ್ಯ ಕಲ್ಪಿಸುವ ಉದ್ದೇಶದಿಂದ ನಬಾರ್ಡ್ ಮೂಲಕ ಸಹ-ಹೂಡಿಕೆ ಮಾದರಿಯಲ್ಲಿ ಬಂಡವಾಳ ಸಂಗ್ರಹಿಸಲಾಗುತ್ತದೆ. ರೈತ ಉತ್ಪಾದಕ ಸಂಘ (ಎಫ್‌ಪಿಒ)ಗಳಿಗೆ ಅಗತ್ಯ ನೆರವು ನೀಡುವುದು, ರೈತರಿಗೆ ಬಾಡಿಗೆ ಆಧಾರದಲ್ಲಿ ಕೃಷಿ ಯಂತ್ರೋಪಕರಣಗಳನ್ನು ಒದಗಿಸುವುದು, ಅಗತ್ಯ ತಾಂತ್ರಿಕ ನೆರವು ಒದಗಿಸುವುದು ಸಹ ಈ ಸ್ಟಾರ್ಟ್‌ಅಪ್ ಮತ್ತು ಕೃಷಿ ಉದ್ಯಮಗಳ ಚಟುವಟಿಕೆಗಳಲ್ಲಿ ಸೇರಿದೆ.

ಕೃಷಿಯಲ್ಲಿ ಆಧುನಿಕ ತಂತ್ರಜ್ಞಾನಗಳ ಬಳಕೆಯು ರೈತರ ಆದಾಯ ವೃದ್ಧಿಯಲ್ಲಿ ಮುಖ್ಯಪಾತ್ರ ವಹಿಸಲಿದೆ ಎಂದು ಭಾವಿಸಿರುವ ಸರಕಾರವು ಅದಕ್ಕಾಗಿ ಖಾಸಗಿ-ಸಾರ್ವಜನಿಕ ಸಹಭಾಗಿತ್ವದಲ್ಲಿ ಯೋಜನೆ ರೂಪಿಸಲು ತೀರ್ಮಾನಿಸಿದೆ. ಸಂಶೋಧನಾ ವಲಯ ಹಾಗೂ ಕೃಷಿ ಶಿಕ್ಷಣಕ್ಕೆ ಸಂಬಂಧಿಸಿದ ಸಂಸ್ಥೆಗಳನ್ನು ಪಾಲುದಾರರಾಗಿ ಬಳಸಿಕೊಳ್ಳುವುದು ಸರಕಾರದ ಉದ್ದೇಶವಾಗಿದೆ. ಕೃಷಿಗೆ ಸಂಬಂಧಿಸಿದಂತೆ ಡಿಜಿಟಲ್ ಮತ್ತು ಅತ್ಯಾಧುನಿಕ ತಂತ್ರಜ್ಞಾನಗಳನ್ನು ರೈತರಿಗೆ ತಲಪಿಸುವುದು ಈ ಯೋಜನೆಯ ಪ್ರಮುಖ ಉದ್ದೇಶವಾಗಿದೆ. ಅಲ್ಲದೇ, ಕೃಷಿ ವಿಶ್ವವಿದ್ಯಾಲಯಗಳು ಶೂನ್ಯ ಬಂಡವಾಳ ಕೃಷಿ, ಸಹಜ ಕೃಷಿ, ಆಧುನಿಕ ಕೃಷಿ ವಿಧಾನ, ಕೃಷಿ ಮತ್ತು ಕೃಷಿ ನಿರ್ವಹಣೆಯಲ್ಲಿ ಮೌಲ್ಯವರ್ಧನೆಗೆ ಪೂರಕವಾಗಿ ಕೃಷಿ ವಿಶ್ವವಿದ್ಯಾಲಯಗಳು ಪಠ್ಯಕ್ರಮದಲ್ಲಿ ಪರಿಷ್ಕರಣೆ ಮಾಡಿಕೊಳ್ಳುವಂತೆ ಉತ್ತೇಜನ ನೀಡುವುದಾಗಿಯೂ ಸರಕಾರ ಪ್ರಕಟಿಸಿದೆ.

ಸಹಜ ಕೃಷಿಗೆ ಒತ್ತು: ದೇಶಾದ್ಯಂತ ಸಹಜ ಕೃಷಿಗೆ ಉತ್ತೇಜನ ನೀಡುವುದಾಗಿಯೂ ಬಜೆಟ್‌ನಲ್ಲಿ ಘೋಷಿಸಲಾಗಿದೆ. ಗಂಗಾ ನದಿ ತಟದ ಪ್ರದೇಶಗಳಿಂದಲೇ ಈ ಅಭಿಯಾನ ಆರಂಭವಾಗಲಿದೆ. ಗಂಗಾ ನದಿಗುಂಟ ಐದು ಕಿ.ಮೀ ವ್ಯಾಪ್ತಿಯ ಜಮೀನುಗಳಲ್ಲಿ ರಾಸಾಯನಿಕ ಮುಕ್ತ ಸಹಜ ಕೃಷಿಗೆ ಉತ್ತೇಜನ ನೀಡಲು 'ಕಾರಿಡಾರ್'ಗಳ ನಿರ್ಮಾಣಕ್ಕೂ ಕೇಂದ್ರ ಸರಕಾರ ನಿರ್ಧರಿಸಿದೆ.

ಎಣ್ಣೆ ಕಾಳು ಉತ್ಪಾದನೆ: ಖಾದ್ಯ ತೈಲ ವಿಚಾರದಲ್ಲಿ ಬೇರೆ ದೇಶಗಳ ಮೇಲಿನ ಅವಲಂಬನೆಯನ್ನು ತಗ್ಗಿಸಬೇಕು ಎನ್ನುವುದು ಕೇಂದ್ರ ಸರಕಾರದ ನಿಲುವು. ಈ ಗುರಿ ಸಾಧನೆಗಾಗಿ ದೇಶೀಯವಾಗಿ ಎಣ್ಣೆಕಾಳು ಉತ್ಪಾದನೆ ಹೆಚ್ಚಳಕ್ಕೆ ಸಮಗ್ರ ಯೋಜನೆ ರೂಪಿಸುವುದಾಗಿಯೂ ಮುಂಗಡಪತ್ರದಲ್ಲಿ ಘೋಷಿಸಲಾಗಿದೆ.

ಕಾನೂನು ಬದಲಾವಣೆ: ಕೃಷಿ ಅರಣ್ಯೀಕರಣ ಮತ್ತು ಖಾಸಗಿ ಅರಣ್ಯೀಕರಣವನ್ನು ಪ್ರೋತ್ಸಾಹಿಸಲು ಸರಕಾರವು ನೀತಿ ಮತ್ತು ಸಂಬಂಧಿಸಿದ ಶಾಸನಗಳಲ್ಲಿ ಆಮೂಲಾಗ್ರ ಬದಲಾವಣೆ ತರಲಿದೆ. ಇದಲ್ಲದೆ, ಕೃಷಿ ಅರಣ್ಯೀಕರಣ ಕೈಗೊಳ್ಳುವ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ರೈತರಿಗೆ ವಿಶೇಷ ಪ್ರೋತ್ಸಾಹ ನೀಡಲಾಗುವುದು ಎಂದೂ ನಿರ್ಮಲಾ ಸೀತಾರಾಮನ್ ಘೋಷಿಸಿದ್ದಾರೆ.





Rs 300 crore for digitisation of agri cooperatives

Umbrella scheme planned to provide them support



REVAMPING AND MODERNISATION

- Rs 25 crore for revamping the existing cooperative training structure and modernising training methods
- Rs 39 crore for The National Council for Cooperative Training (NCCT)
- Rs 11 crore for Vaikunthlal Mehta National Institute of Cooperative Management to become independent

SHEMIN JOY
NEW DELHI, DHNS

The six-month-old Ministry of Cooperation, headed by Amit Shah, has been allocated Rs 900 crore in the latest Budget with the bulk going to digitisation of around 63,000 primary agriculture cooperative societies (PACS) and an umbrella scheme providing support in terms of finance, technology and infrastructure and transform them to successful economic entities.

The ministry was formed on July 7, 2021 and Shah was given the charge. This is the first allocation for the ministry in a Budget.

The highest allocation of Rs 350 crore was for the digitisation of PACS. This scheme aims at computerisation of 63,000 functional PACS leading to increase in its efficiency, profitability, transparency and accountability.

Another Rs 274 crore has been earmarked for an umbrella scheme for the overall development of cooperatives by providing them necessary support in terms of finance, technology and infrastructure and transforming them into successful entities.

This will be used for recapitalisation of PACS, seed money for new PACS, revival of defunct PACS and transformation of PACS into multi-role cooperatives on the lines of Farmer Producer Organisations (FPOs), assistance to cooperative societies in branding, marketing and trade, capital subsidy for creation of basic infrastructure and creation of a national database of cooperative societies.

For the new scheme Cooperative Credit Guarantee Fund for providing credit guarantee on loans of PACS and other primary cooperative societies, Rs 1 crore has been allocated. The Budget has earmarked Rs 30 crore for introducing cooperative education as a course and also as an independent degree/diploma course in schools and universities. This is expected to take care of research.

Agri-tech: drones, start-up fund in focus

A scheme through public-private partnership to be launched for farmers

SPECIAL CORRESPONDENT
NEW DELHI

The emerging agri-tech sector has been enthused by the abundance of digital farming references in the Union Budget speech on Tuesday.

"For delivery of digital and hi-tech services to farmers with the involvement of public sector research and extension institutions along with private agri-tech players and stakeholders of agri-value chain, a scheme through PPP [public-private partnership] mode will be launched," said Finance Minister Nirmala Sitharaman.

She added that a fund with blended capital, raised under the co-investment model, would be facilitated through NABARD. "This is to finance start-ups for agriculture and rural enterprise, relevant for farm produce value chain. The activities for these start-ups will include, *inter alia*, support for FPOs, machinery for farmers on rental basis and technology, including IT-based support," said Ms. Sitharaman.



A digital fillip: The FM promised to promote the use of drones for spraying of insecticides on fields. ▪ PTI

With a wider focus on drone technology, the Minister promised to promote the use of "kisan drones" for crop assessment, digitisation of land records, and spraying of insecticides and nutrients on fields. In fact, the Budget speech emphasised the efficient use of land resources via technology. "States will be encouraged to adopt Unique Land Parcel Identification Number to facilitate IT-based management of records. The facility for transliteration of land records across any of the Schedule VIII languages will also be rolled out," she said.

"The adoption or linkage with National Generic Document Registration System (NGDRS) with the 'One-Nation One-Registration Software', will be promoted as an option for uniform process for registration and 'anywhere registration' of deeds and documents," said Ms. Sitharaman.

"The expansion of technology focus from just tractors and agri-machinery to 'kisan drones' shows a rising interest in the application of IOT in the sector," said AgroStar CEO Shardul Sheth.

ಬೆಳೆ ಸಮೀಕ್ಷೆಗೆ ಕಿಸಾನ್ ಡ್ರೋನ್ ತಂತ್ರಜ್ಞಾನ | ಭೂದಾಖಲೆ ಡಿಜಿಟಲೀಕರಣ, ಕೀಟನಾಶಕ ಸಿಂಪಡಣೆಗೂ ಡ್ರೋನ್ | ರಾಸಾಯನಿಕ ರಹಿತ ನೈಸರ್ಗಿಕ ಕೃಷಿ ಕೈಗೊಳ್ಳಲು ರೈತರಿಗೆ ಉತ್ತೇಜನ | ಕೃಷಿ ಸಂಬಂಧಿ ಸ್ಟಾರ್ಟಪ್, ಗ್ರಾಮೀಣ ಉದ್ದಿಮೆಗಳ ಸ್ಥಾಪನೆಗೆ ನೆರವು
ಬೆಂಬಲ ಬೆಲೆಯಡಿ 1208 ಲಕ್ಷ ಟನ್ ಭತ್ತ, ಗೋದಿ ಖರೀದಿಗೆ 2.37 ಕೋಟಿ ರು. | ಭಾರತದ ಸಿರಿಧಾನ್ಯಕ್ಕೆ ಅಂತಾರಾಷ್ಟ್ರೀಯ, ಸ್ಥಳೀಯ ಮಾರುಕಟ್ಟೆ ಸೃಷ್ಟಿಸಲು ಕ್ರಮ | ಕೃಷಿ ಅರಣ್ಯೀಕರಣ ಕೈಗೊಳ್ಳುವ ಎಸ್‌ಸಿ, ಎಸ್‌ಟಿ ಸಮುದಾಯದವರಿಗೆ ಆರ್ಥಿಕ ನೆರವು

ಕೃಷಿಗೆ ಡಿಜಿಟಲ್, ಸಾವಯವ, ಸಿರಿಧಾನ್ಯ ಮಂತ್ರ

ಸಿರಿಧಾನ್ಯಗಳಿಗೆ ವಿದೇಶಿ ಮಾರುಕಟ್ಟೆ

ಬೆಳೆ ಬೆಳೆಯಲು ಪ್ರೋತ್ಸಾಹ, ಕೊಯ್ಲೋತ್ತರ ತಂತ್ರಜ್ಞಾನಕ್ಕೆ ನೆರವು
ಸ್ಥಳೀಯ, ಅಂತಾರಾಷ್ಟ್ರೀಯ ಮಾರುಕಟ್ಟೆ ಕಲ್ಪಿಸಲು ಸೂಕ್ತ ವ್ಯವಸ್ಥೆ

ಕೃಷಿ ಕ್ಷೇತ್ರಕ್ಕೆ ಆಧುನಿಕ ಸ್ಪರ್ಶ ನೀಡಲು ಡಿಜಿಟಲ್ ತಂತ್ರಜ್ಞಾನಗಳನ್ನು ಬಳಸಲು ನಿರ್ಧರಿಸಿರುವ ಕೇಂದ್ರ ಸರ್ಕಾರ, ಅದೇ ವೇಳೆ ರಾಸಾಯನಿಕರಹಿತ ನೈಸರ್ಗಿಕ ಕೃಷಿಗೂ ಉತ್ತೇಜನ ನೀಡುವ ಮೂಲಕ ಭಾರತದ ಕೃಷಿ ಕ್ಷೇತ್ರವನ್ನು ಏಕಕಾಲಕ್ಕೆ ಆಧ್ಯಾಧುನಿಕಗೊಳಿಸಲು ಮತ್ತು ಆರೋಗ್ಯಕರವಾಗಿ ರೂಪಿಸಲು ಬಜೆಟ್‌ನಲ್ಲಿ ಕ್ರಮ ಕೈಗೊಂಡಿದೆ. ಇದಕ್ಕಾಗಿ 'ಕಿಸಾನ್ ಡ್ರೋನ್', ರಾಸಾಯನಿಕರಹಿತ ನೈಸರ್ಗಿಕ ಕೃಷಿ, ದೇಶಾದ್ಯಂತ ರೈತರಿಗೆ ಡಿಜಿಟಲ್ ಮತ್ತು ಫೈಬರ್ ಸೇವೆಗಳನ್ನು ನೀಡಲು ಸಾರ್ವಜನಿಕ ಮತ್ತು ಖಾಸಗಿ ಸಹಭಾಗಿತ್ವ, ಭೂದಾಖಲೆಗಳನ್ನು ಡಿಜಿಟಲೀಕರಣಗೊಳಿಸಲು ಮತ್ತು ಕೀಟನಾಶಕಗಳನ್ನು ಸಿಂಪಡಿಸಲು ಡ್ರೋನ್‌ಗಳ ಬಳಕೆ ಮುಂತಾದ ಕಾರ್ಯಕ್ರಮಗಳನ್ನು ಘೋಷಿಸಿದೆ.

'ದೇಶದ ನಾಲ್ಕು ಅದ್ಭುತ ಕಾರ್ಯಕ್ರಮಗಳಲ್ಲಿ ಕೃಷಿ ಕ್ಷೇತ್ರವನ್ನು ಎಲ್ಲರೂ ಲಾಭದಾಯಕವಾಗುವಂತೆ ಅಭಿವೃದ್ಧಿಪಡಿಸುವುದೂ ಒಂದು. ಎಲ್ಲರನ್ನೂ ಒಳಗೊಳ್ಳುವ ಆಲೋಚನೆ ಜೊತೆಗೆ ಸುಸ್ಥಿರ, ಭೂದಾಖಲೆಗಳ ಆಧುನೀಕರಣಕ್ಕೆ ಮತ್ತು ಕೀಟನಾಶಕಗಳನ್ನು ಸಿಂಪಡಿಸುವುದಕ್ಕೆ ಡ್ರೋನ್‌ಗಳನ್ನು ಬಳಸುವ 'ಕಿಸಾನ್ ಡ್ರೋನ್' ಯೋಜನೆ ಜಾರಿಗೊಳಿಸಲಾಗುವುದು' ಎಂದು ಬಜೆಟ್‌ನಲ್ಲಿ ವಿತ್ತ ಮಂತ್ರಿ ನಿರ್ಮಲಾ ಸೀತಾರಾಮನ್ ಪ್ರಕಟಿಸಿದ್ದಾರೆ.



ಎಣ್ಣೆಕಾಳು ಬೆಳೆಯಲು ಪ್ರೋತ್ಸಾಹ

ದೇಶದಲ್ಲಿ ತೀವ್ರ ಮಬುಲಿಯಾಗಿರುವ ಖಾದ್ಯತೈಲದ ಬೆಲೆ ತಗ್ಗಿಸಲು ಸ್ಥಳೀಯವಾಗಿ ಎಣ್ಣೆಕಾಳುಗಳನ್ನು ಬೆಳೆಯುವ ರೈತರಿಗೆ ಪ್ರೋತ್ಸಾಹ ನೀಡಲು ಬಜೆಟ್‌ನಲ್ಲಿ ನಿರ್ಧರಿಸಲಾಗಿದೆ. ಆದರ ಮೂಲಕ ಖಾದ್ಯತೈಲದ ಆಮದು ಕಡಿಮೆ ಮಾಡಲು ಯೋಜನೆ ರೂಪಿಸಲಾಗುವುದು. ದೇಶದಲ್ಲಿ ಎಣ್ಣೆಕಾಳುಗಳನ್ನು ಬೆಳೆಯಲು ರೈತರಿಗೆ ಪ್ರೋತ್ಸಾಹ ನೀಡುವುದಕ್ಕೆ ಸಮಗ್ರ ಹಾಗೂ ಕಡಿಮೆ ಮೆಚ್ಚದ ಯೋಜನೆಯನ್ನು ರೂಪಿಸಲು ನಿರ್ಧರಿಸಲಾಗಿದೆ ಎಂದು ನಿರ್ಮಲಾ ಸೀತಾರಾಮನ್ ಪ್ರಕಟಿಸಿದ್ದಾರೆ.





2023
ಅಂತಾರಾಷ್ಟ್ರೀಯ ಸಿರಿಧಾನ್ಯ ವರ್ಷ

ಭಾರತವು ಸಿರಿಧಾನ್ಯಗಳಿಗೆ ಹೆಸರು ಮಾಡಿದೆ. ಆರೋಗ್ಯ ಕಾಪಾಡುವ ಹಾಗೂ ಹೆಚ್ಚಿನ ಪೋಷಕಾಂಶಗಳನ್ನು ಒಳಗೊಂಡ ಸಿರಿಧಾನ್ಯಗಳನ್ನು ಹೆಚ್ಚು ನೀರು, ಗೊಬ್ಬರ, ಕೀಟನಾಶಕಗಳ ಅಗತ್ಯವಿಲ್ಲದೆ ಸುಲಭವಾಗಿ ಬೆಳೆಯಬಹುದು. ಆದರೆ, ಸರಿಯಾದ ಮಾರುಕಟ್ಟೆ ಮತ್ತು ಕಡಿಮೆ ಜಾಗ್ರತಿಗಳು ಲಭ್ಯವಿಲ್ಲದ ಕಾರಣ ಈ ಬೆಳೆಗಳನ್ನು ರೈತರು ಸಾಕಷ್ಟು ಬೆಳೆಯುತ್ತಿಲ್ಲ. ಈ ಹಿನ್ನೆಲೆಯಲ್ಲಿ 2023ನ್ನು ಅಂತಾರಾಷ್ಟ್ರೀಯ ಸಿರಿಧಾನ್ಯ ವರ್ಷವೆಂದು ಈಗಾಗಲೇ ಸ್ಥಿರಪಡಿಸಿದೆ. ಭಾರತ ಸಲ್ಲಿಸಿದ್ದ ಇಂಥದ್ದೊಂದು ಪ್ರಸ್ತಾವನೆಗೆ ಅಧಿಕೃತವಾಗಿ ಎನ್ನುವಷ್ಟು 193 ದೇಶಗಳು ಬೆಂಬಲ ವ್ಯಕ್ತಪಡಿಸಿದವು. ಈ ಹಿನ್ನೆಲೆಯಲ್ಲಿ ಈ ವರ್ಷ ರೈತರಿಗೆ ಸಿರಿಧಾನ್ಯಗಳನ್ನು ಬೆಳೆಯಲು ಹೆಚ್ಚಿನ ಪ್ರೋತ್ಸಾಹ ನೀಡಲು ನಿರ್ಧರಿಸಲಾಗಿದೆ. ಸಿರಿಧಾನ್ಯಗಳಿಗೆ ಕೊಯ್ಲೋತ್ತರ ತಂತ್ರಜ್ಞಾನಗಳನ್ನು ಒದಗಿಸುವುದು ಹಾಗೂ ಸ್ಥಳೀಯವಾಗಿ ಮತ್ತು ಅಂತಾರಾಷ್ಟ್ರೀಯವಾಗಿ ಮಾರುಕಟ್ಟೆ ಕಲ್ಪಿಸಲು ಸರ್ಕಾರ ಮುಂದಾಗಿದೆ. ಜೊತೆಗೆ ಸಿರಿಧಾನ್ಯಗಳಿಗೆ ಬ್ರ್ಯಾಂಡಿಂಗ್ ಕಲ್ಪಿಸುವ ಮೂಲಕ ಆವುಗಳಿಗೆ ಹೆಚ್ಚಿನ ಮೌಲ್ಯ ಕಲ್ಪಿಸುವ, ಆ ಮೂಲಕ ರೈತರ ಆದಾಯ ಹೆಚ್ಚಿಸಲು ಸರ್ಕಾರ ಮುಂದಾಗಿದೆ.

ಬೆಂಬಲ ಬೆಲೆಗೆ ₹2.37 ಲಕ್ಷ ಕೋಟಿ

2021-22ನೇ ಸಾಲಿನಲ್ಲಿ ಬೆಂಬಲ ಬೆಲೆಯಡಿ ರೈತರಿಂದ 1208 ಲಕ್ಷ ಟನ್ ಭತ್ತ ಮತ್ತು ಗೋದಿಯ ಖರೀದಿಸಿ, 2.37 ಲಕ್ಷ ಕೋಟಿ ರುಪಾಯಿಗಳನ್ನು ಬೆಂಬಲ ಬೆಲೆಯ ರೂಪದಲ್ಲಿ ವರ್ಗಾವಣೆ ಮಾಡಲಾಗುತ್ತದೆ.

ಕೃಷಿ ವಿವಿಗಳಿಗೆ ಹೊಸ ಸಿಲೆಬಸ್

ದೇಶದಲ್ಲಿನೈಸರ್ಗಿಕ ಕೃಷಿ ಬಂಡವಾಳ ಕೃಷಿ ಮತ್ತು ಸಹಜ ಕೃಷಿಯನ್ನು ಪ್ರೋತ್ಸಾಹಿಸಲು ಕೇಂದ್ರ ಸರ್ಕಾರ ನಿರ್ಧರಿಸಿದೆ. ಅದೇ ವೇಳೆ ಆಧುನಿಕ ಕೃಷಿಗೂ ಪ್ರೋತ್ಸಾಹ ನೀಡಲು ಮತ್ತು ಕೃಷಿಯ ಮೌಲ್ಯವರ್ಧನೆ ಹಾಗೂ ನಿರ್ವಹಣೆಗೆ ನೆರವಾಗಲು ಮುಂದಾಗಿದೆ. ಇದಕ್ಕೆ ತಕ್ಕಂತೆ ದೇಶಾದ್ಯಂತ ಇರುವ ಕೃಷಿ ವಿಶ್ವವಿದ್ಯಾಲಯಗಳಿಗೆ ತಮ್ಮ ಪಠ್ಯಕ್ರಮವನ್ನು ಪರಿಷ್ಕರಿಸಲು ರಾಜ್ಯ ಸರ್ಕಾರಗಳಿಗೆ ಪ್ರೋತ್ಸಾಹ ನೀಡಲು ನಿರ್ಧರಿಸಿದೆ. ಕೃಷಿ ವಿಮೆಗಳ ಮೂಲಕ ರೈತರಿಗೆ ಹೊಸ ಬಂಡವಾಳ ಮತ್ತು ಆಧುನಿಕ ಕೃಷಿಯ ಲಾಭ ಸಿಗುವಂತೆ ಮಾಡಲು ಕಾರ್ಯಕ್ರಮಗಳನ್ನು ರೂಪಿಸಲಾಗುತ್ತದೆ.

2942
ಕೋಟಿ ರು.
ಆಹಾರ ಸಂಸ್ಕರಣೆ ಉದ್ದಿಮೆಗಳಿಗೆ ನೀಡುವ ನೆರವಿನ ಪ್ರಮಾಣ

ಕೃಷಿ ಅರಣ್ಯಕ್ಕೆ ಒತ್ತು

ಕೃಷಿಯ ಜೊತೆಗೇ ಅರಣ್ಯೀಕರಣಕ್ಕೂ ಒತ್ತು ನೀಡುವ ನೀತಿಯನ್ನು ಜಾರಿಗೆ ತರಲು ಕೇಂದ್ರ ಸರ್ಕಾರ ನಿರ್ಧರಿಸಿದ್ದು, ಇದಕ್ಕೆ ಅಗತ್ಯವಿರುವ ಕಾಯ್ದೆ ತಿದ್ದುಪಡಿ ನಿರ್ಧರಿಸಿದೆ. ಇದರಿಂದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರು ಕೃಷಿ ಅರಣ್ಯೀಕರಣವನ್ನು ಕೈಗೊಂಡರೆ ಅವರಿಗೆ ಆರ್ಥಿಕ ನೆರವು ನೀಡಲು ಯೋಜನೆ ರೂಪಿಸಲಾಗುತ್ತದೆ.

6.75
ಲಕ್ಷ ಕೋಟಿ
ಪಿಎಂ ಕಿಸಾನ್ ನಿಧಿಯ ಮೂಲಕ ರೈತರಿಗೆ ನೀಡಲು ಮೀಸಲಿಟ್ಟ ಹಣ

ಕೃಷಿ ಕ್ಷೇತ್ರ ಸ್ಟಾರ್ಟಪ್‌ಗಳಿಗೆ ಆರ್ಥಿಕ ನೆರವು

ಕೃಷಿ ಕ್ಷೇತ್ರಕ್ಕೆ ಹೆಚ್ಚಿನ ಬಂಡವಾಳ ಹರಿಬರುವಂತೆ ಮಾಡಲು ಹಾಗೂ ಕೃಷಿ ಉತ್ಪನ್ನಗಳ ಮೌಲ್ಯವರ್ಧನೆಯ ಮೂಲಕ ರೈತರಿಗೆ ನೆರವು ನೀಡಲು ನಬಾರ್ಡ್ ಸಹಯೋಗದಲ್ಲಿ ಆಗ್ರಿಶ್ಯೂರ್ ಫಂಡ್ ಸ್ಥಾಪಿಸಲಾಗುವುದು. ಆ ನಿಧಿಯನ್ನು ಸ್ಟಾರ್ಟಪ್‌ಗಳನ್ನು ಸ್ಥಾಪಿಸಲು ಹಾಗೂ ಗ್ರಾಮೀಣ ಉದ್ದಿಮೆಗಳನ್ನು ಆರಂಭಿಸಲು ಪ್ರೋತ್ಸಾಹ ನೀಡಲಾಗುತ್ತದೆ. ತಾಲ್ಲೂಕ ಕೃಷಿ ಉತ್ಪನ್ನಗಳ ಮೌಲ್ಯವರ್ಧನೆ ಸಂಸ್ಥೆಯನ್ನು ರೂಪಿಸಲಾಗುತ್ತದೆ. ನಬಾರ್ಡ್ ಮೂಲಕ ಸಹ-ಬಂಡವಾಳ ಮಾದರಿಯಲ್ಲಿ ಈ ಯೋಜನೆ ಜಾರಿಗೊಳಿಸಲು ಕೇಂದ್ರ ಸರ್ಕಾರ ನಿರ್ಧರಿಸಿದೆ.ರೈತ ಉತ್ಪಾದಕ ಸಂಸ್ಥೆ (ಎಫ್‌ಪಿಒ)ಗಳಿಗೆ ಈ ಸ್ಟಾರ್ಟಪ್‌ಗಳು ನೆರವು ನೀಡುತ್ತವೆ. ರೈತರಿಗೆ ಆದರ ಹೊಲದ ಸಮೀಪದಲ್ಲೇ ಯಂತ್ರೋಪಕರಣಗಳು ಬಾಡಿಗೆ ಆಧಾರದ ಮೇಲೆ ಸಿಗುವಂತೆಯೂ ಮಾಡಲಾಗುತ್ತದೆ ಎಂದು ನಿರ್ಮಲಾ ಹೇಳಿದ್ದಾರೆ.

10443
ಕೋಟಿ ರು.
ರಾಷ್ಟ್ರೀಯ ಕೃಷಿ ವಿಕಾಸ ಯೋಜನೆಗೆ ನೆರವು

ಇ-ವಿದ್ಯಾದಡಿ ಮಕ್ಕಳಿಗೆ 200 ಟೀವಿ ಚಾನಲ್

'ಒಂದು ತರಗತಿ-ಒಂದು ಟೀವಿ ಚಾನಲ್' ಯೋಜನೆ ವಿಸ್ತರಣೆ
ಪ್ರಾದೇಶಿಕ ಭಾಷೆಯಲ್ಲೂ ಹೆಚ್ಚುವರಿ ಶಿಕ್ಷಣ ನೀಡಲು ಸಹಾಯ

ಕೊರೋನಾ ನೋಂಕು ನಿಗ್ರಹಕ್ಕಾಗಿ ಘೋಷಣೆ ಮಾಡಲಾದ ನಿರ್ಬಂಧಗಳಿಂದ ಶಾಲಾ ಕಲಿಕೆಯಿಂದ ವಂಚಿತರಾದ ಮಕ್ಕಳ ನೆರವಿಗೆ ಕೇಂದ್ರ ಸರ್ಕಾರ ಧಾವಿಸಿದೆ. 'ಪ್ರಧಾನಮಂತ್ರಿ ಇ-ವಿದ್ಯಾ' ಯೋಜನೆಯಡಿ ಇಂತಹ ಮಕ್ಕಳಿಗೆ ಹೆಚ್ಚುವರಿ ಶಿಕ್ಷಣ ಸೌಲಭ್ಯ ನೀಡಲು 200 ಟೀವಿ ಚಾನಲ್‌ಗಳನ್ನು ಮೀಸಲಿರುವುದಾಗಿ ಬಜೆಟ್‌ನಲ್ಲಿ ಪ್ರಕಟಿಸಿದೆ.

ಇ-ವಿದ್ಯಾ ಯೋಜನೆಯಡಿ 'ಒಂದು ತರಗತಿ, ಒಂದು ಟೀವಿ ಚಾನಲ್' ಕಾರ್ಯಕ್ರಮವನ್ನಿಡಿಯುತ್ತಿದೆ. ಸದ್ಯ 10ರಿಂದ 12ನೇ ತರಗತಿ ಮಕ್ಕಳಿಗಾಗಿ ಈ ಯೋಜನೆಯಡಿ 12 ಟೀವಿ ಚಾನಲ್‌ಗಳು ಕಾರ್ಯನಿರ್ವಹಿಸುತ್ತಿವೆ. ಅವನ್ನು 200ಕ್ಕೆ ಹೆಚ್ಚಿಸಲು ಮಾಹುವುದಾಗಿ ವಿತ್ತ ಸಚಿವೆ ನಿರ್ಮಲಾ ಸೀತಾರಾಮನ್ ಅವರು ಬಜೆಟ್ ಭಾಷಣದಲ್ಲಿ ಘೋಷಿಸಿದ್ದಾರೆ. ಈ ಯೋಜನೆಯಂತೆ 1ರಿಂದ 12ನೇ ತರಗತಿಗಳ ಮಕ್ಕಳಿಗೆ ಪೂರಕ ಶಿಕ್ಷಣವನ್ನು ಆಯಾ ಪ್ರಾದೇಶಿಕ ಭಾಷೆಯಲ್ಲಿನೀಡಲು ರಾಜ್ಯಗಳಿಗೂ ಅನುಕೂಲವಾಗುತ್ತದೆ ಎಂದು ಅವರು ಹೇಳಿದ್ದಾರೆ.

2 ವರ್ಷ ಶಾಲಾ ಶಿಕ್ಷಣ ಕಳೆದುಕೊಂಡ ಮಕ್ಕಳ ನೆರವಿಗೆ ಕೇಂದ್ರ ಬಜೆಟ್‌ನಲ್ಲಿ ಘೋಷಣೆ

750 ವರ್ಚುವಲ್ ಲ್ಯಾಬ್: ಮಹತ್ವದ ಕ್ರಮವೊಂದರಲ್ಲಿ ಕೇಂದ್ರ ಸರ್ಕಾರವು ಉತ್ತಮ ಗುಣಮಟ್ಟದ ಶಾಲಾ ಶಿಕ್ಷಣವನ್ನು ಒದಗಿಸಲು ಡಿಜಿಟಲ್ ವಿಶ್ವವಿದ್ಯಾಲಯವೊಂದನ್ನು ಸ್ಥಾಪಿಸುವುದಾಗಿ ನಿರ್ಮಲಾ ಸೀತಾರಾಮನ್ ಘೋಷಿಸಿದ್ದಾರೆ.

ವಿವಿಧ ಭಾರತೀಯ ಭಾಷೆಗಳಲ್ಲಿ ಇಳಿಶಿಕ್ಷಣ ಒದಗಿಸಲಾಗುತ್ತದೆ. ಐಟಿ (ಮಾಹಿತಿ ಮತ್ತು ಸಂಪರ್ಕ ತಂತ್ರಜ್ಞಾನ) ವಿಷಯಗಳು ಇರಲಿವೆ. 'ಹಬ್ ಸ್ಕೂಲ್' ಮಾದರಿಯಲ್ಲಿ ಸಮಗ್ರವಿದ್ಯಾಲಯ ವಸ್ತು ಆರಂಭಿಸಲಾಗುತ್ತದೆ. ದೇಶದಾದ್ಯಂತ ಇನಿತಿವಿವಿ ಮಾದರಿಯಲ್ಲಿ ಜಿಜಿ ಸಹಭಾಗಿತ್ವ ಸಾಧಿಸಲಾಗುತ್ತದೆ ಎಂದು ಹೇಳಿದ್ದಾರೆ.

ಎಲ್ಲ ಭಾಷೆಗಳಲ್ಲೂ ಇ-ಕಂಟೆಂಟ್: ಇಂಟರ್ನೆಟ್, ಮೊಬೈಲ್ ಫೋನ್, ಟೀವಿ ಹಾಗೂ ರೇಡಿಯೋಗಳಲ್ಲಿ ಡಿಜಿಟಲ್ ಶಿಕ್ಷಕರ ಮೂಲಕ ನೀಡಲು ಇ-ಕಂಟೆಂಟ್ ಅನ್ನು ಎಲ್ಲ ಭಾಷೆಗಳಲ್ಲೂ ಅಭಿವೃದ್ಧಿಪಡಿಸಲಾಗುವುದು ಎಂದು ವಿತ್ತ ಸಚಿವರು ಹೇಳಿದ್ದಾರೆ.



ಮನೆಬಾಗಿಲಲ್ಲೇ ಶಿಕ್ಷಣಕ್ಕೆ ಡಿಜಿಟಲ್ ವಿಶ್ವವಿದ್ಯಾಲಯ

ಕೇರಳದಲ್ಲಿ ಈಗಾಗಲೇ ಇದೆ ಮೊದಲ ಡಿಜಿಟಲ್ ವಿವಿ

ವಿದ್ಯಾರ್ಥಿಗಳ ಮನೆ ಬಾಗಿಲಿನಲ್ಲೇ ವಿಶ್ವವಿದ್ಯಾಲಯ ಸ್ಥಾಪಿಸುವ ಪ್ರಸ್ತಾವನೆಯನ್ನು ಕೇಂದ್ರ ಬಜೆಟ್ ಘೋಷಿಸಿದೆ. ಇಂಥ ಪರಿಕಲ್ಪನೆಯ ಮೊದಲ ಡಿಜಿಟಲ್ ವಿಶ್ವವಿದ್ಯಾಲಯ ಕೇರಳದಲ್ಲಿ ಈಗಾಗಲೇ ಕಾರ್ಯಾರಂಭಿಸಿದೆ. ಕೇರಳ ಡಿಜಿಟಲ್ ಯೂನಿವರ್ಸಿಟಿ ಎಂಬ ಹೆಸರಿನ ಈ ವಿವಿಯನ್ನು ಕಳೆದ ವರ್ಷ ಫೆಬ್ರವರಿಯಲ್ಲಿ ಕೇರಳದಲ್ಲಿ ದೇಶದ ಮೊದಲ ಡಿಜಿಟಲ್ ವಿಶ್ವವಿದ್ಯಾಲಯ ಪ್ರಾರಂಭವಾಗಿ, ಕಾರ್ಯನಿರ್ವಹಿಸುತ್ತಿದೆ. ತಿರುವನಂತಪುರದ ಟೆಕ್ನೊ�ಲಿಟಿಯಲ್ಲಿ ಈ ವಿವಿ ಇದ್ದು, 'ಕೇರಳ ಡಿಜಿಟಲ್ ವಿಜ್ಞಾನಗಳು, ನಾವೀನ್ಯತೆ ಮತ್ತು ತಂತ್ರಜ್ಞಾನ ವಿಶ್ವವಿದ್ಯಾಲಯ' (ಡಿಜಿಟಲ್ ಯುನಿವರ್ಸಿಟಿ) ಎಂಬ ಹೆಸರು ಹೊಂದಿದೆ. ಸ್ನಾತಕೋತ್ತರ ಹಾಗೂ ಸಂಶೋಧನೆ ಕೋರ್ಸುಗಳಿಗೆ ಇದು ಒತ್ತು ನೀಡುತ್ತಿದೆ. ಆರ್ಟಿಫಿಶಿಯಲ್ ಇಂಟೆಲಿಜೆನ್ಸ್, ಎಐ ಹಾರ್ಡ್‌ವೇರ್, ಸೈಬರ್ ಸೆಕ್ಯುರಿಟಿ ಎಂಬಿಎಯಿಂಗ್ ನಂತಹ ವಿಶೇಷಗಳು ಇಲ್ಲಿ ಲಭ್ಯವಿರುತ್ತವೆ.

ಅಂದಹಾಗೆ, ಇದು ದೇಶದ ಮೊದಲ ಡಿಜಿಟಲ್ ವಿವಿಯಲ್ಲ. ಕಳೆದ ವರ್ಷ ಫೆಬ್ರವರಿಯಲ್ಲಿ ಕೇರಳದಲ್ಲಿ ದೇಶದ ಮೊದಲ ಡಿಜಿಟಲ್ ವಿಶ್ವವಿದ್ಯಾಲಯ ಪ್ರಾರಂಭವಾಗಿ, ಕಾರ್ಯನಿರ್ವಹಿಸುತ್ತಿದೆ. ತಿರುವನಂತಪುರದ ಟೆಕ್ನೊಲಿಟಿಯಲ್ಲಿ ಈ ವಿವಿ ಇದ್ದು, 'ಕೇರಳ ಡಿಜಿಟಲ್ ವಿಜ್ಞಾನಗಳು, ನಾವೀನ್ಯತೆ ಮತ್ತು ತಂತ್ರಜ್ಞಾನ ವಿಶ್ವವಿದ್ಯಾಲಯ' (ಡಿಜಿಟಲ್ ಯುನಿವರ್ಸಿಟಿ) ಎಂಬ ಹೆಸರು ಹೊಂದಿದೆ. ಸ್ನಾತಕೋತ್ತರ ಹಾಗೂ ಸಂಶೋಧನೆ ಕೋರ್ಸುಗಳಿಗೆ ಇದು ಒತ್ತು ನೀಡುತ್ತಿದೆ. ಆರ್ಟಿಫಿಶಿಯಲ್ ಇಂಟೆಲಿಜೆನ್ಸ್, ಎಐ ಹಾರ್ಡ್‌ವೇರ್, ಸೈಬರ್ ಸೆಕ್ಯುರಿಟಿ ಎಂಬಿಎಯಿಂಗ್ ನಂತಹ ವಿಶೇಷಗಳು ಇಲ್ಲಿ ಲಭ್ಯವಿರುತ್ತವೆ.

ಕೃಷಿ ಕ್ಷೇತ್ರಕ್ಕೆ ಬಂಪರ್ 1.3 ಲಕ್ಷ ಕೋಟಿ ಅನುದಾನ

ಕಳೆದ ವರ್ಷಕ್ಕಿಂತ ಶೇ.4.5ರಷ್ಟು ಹೆಚ್ಚಿಸಿದ ಕೇಂದ್ರ | ಮೀನುಗಾರಿಕೆ, ಪಶುಸಂಗೋಪನೆಗೆ ಶೇ.44 ಏರಿಕೆ

ಕೃಷಿ ಕ್ಷೇತ್ರಕ್ಕೆ ಈ ಬಾರಿಯ ಬಜೆಟ್‌ನಲ್ಲಿ ಬಂಪರ್ ಅನುದಾನ ನೀಡಲಾಗಿದ್ದು, ಕಳೆದ ವರ್ಷ ನೀಡಿದ್ದಕ್ಕಿಂತ ಶೇ.4.5ರಷ್ಟು ಹೆಚ್ಚು ನೆರವು ಪ್ರಕಟಿಸಲಾಗಿದೆ. ರೈತರ ಆದಾಯ ದ್ವಿಗುಣಗೊಳಿಸಲು ಹಾಗೂ ಕೃಷಿ ಕ್ಷೇತ್ರವನ್ನು ಸುಧಾರಿಸಲು 2022-23ನೇ ಸಾಲಿನಲ್ಲಿ ಒಟ್ಟು 1,32,513 ಕೋಟಿ ರು. ತೆಗೆದಿರಿಸಲಾಗಿದೆ.

ಇದೇ ವೇಳೆ, ಕೃಷಿ ಸಂಬಂಧಿ ಕ್ಷೇತ್ರಗಳಾದ ಮೀನುಗಾರಿಕೆ, ಪಶು ಸಂಗೋಪನೆ ಹಾಗೂ ಡೈರಿ ಕ್ಷೇತ್ರಕ್ಕೆ ಅನುದಾನವನ್ನು ಬಂಪರ್ ಶೇ.44ರಷ್ಟು ಹೆಚ್ಚಿಸಲಾಗಿದ್ದು, 6407 ಕೋಟಿ ರು. ನೀಡಲಾಗಿದೆ. ಆಹಾರ ಸಂಸ್ಕರಣೆ ಉದ್ದಿಮೆಗಳಿಗೆ ನೀಡುವ ನೆರವನ್ನು 2.25ರಷ್ಟು ಹೆಚ್ಚಿಸಿ 2942 ಕೋಟಿ ರು. ನೀಡಲಾಗಿದೆ.

2022ರಲ್ಲಿ ಪಿಎಂ ಕಿಸಾನ್ ಯೋಜನೆಯಡಿ ರೈತರಿಗೆ ನೇರ ನಗದು ವರ್ಗಾವಣೆ ಮಾಡಲು 6,75,000 ಕೋಟಿ ರು., ಬೆಳೆ ವಿಮೆ ಯೋಜನೆಗೆ 15,500 ಕೋಟಿ ರು., ರಾಷ್ಟ್ರೀಯ ಕೃಷಿ ವಿಕಾಸ ಯೋಜನೆಗೆ 10,443 ಕೋಟಿ ರು.ಮೀಸಲಿರಿಸಲಾಗಿದೆ.



ಗಂಗೆ ಉದ್ದಕ್ಕೂ ನೈಸರ್ಗಿಕ ಕೃಷಿ

ಈ ಮೂಲಕ ಗಂಗಾ ಮಾಲಿನ್ಯ ತಡೆಗೆ ಕೇಂದ್ರದ ಹೆಜ್ಜೆ

ದೇಶದಲ್ಲೇ ಅತೀ ಕಲುಷಿತ ನದಿ ಎಂಬ ಕುಖ್ಯಾತಿಗೆ ಪಾತ್ರವಾಗಿರುವ ಗಂಗಾ ನದಿಯ ದಂಡೆ ಸೇರಿದಂತೆ ದೇಶಾದ್ಯಂತ ರಾಸಾಯನಿಕ ಮುಕ್ತವಾದ ನೈಸರ್ಗಿಕ ಕೃಷಿಗೆ ಉತ್ತೇಜನಕ್ಕೆ ಕೇಂದ್ರ ಸರ್ಕಾರ ನಿರ್ಧರಿಸಿದೆ. ಮೊದಲು ಹಂತದಲ್ಲಿ ಗಂಗಾನದಿಯ ಉದ್ದಕ್ಕೂ 5 ಕಿ.ಮೀ ದಡದ ವ್ಯಾಪ್ತಿಯಲ್ಲಿ ನೈಸರ್ಗಿಕ ಕೃಷಿಗೆ ಉತ್ತೇಜಿಸಲಾಗುತ್ತದೆ. ಆಂದರೆ ಗಂಗಾನದಿ ದಡದ 5 ಕಿ.ಮೀ ವ್ಯಾಪ್ತಿಯಲ್ಲಿರುವ ಜಮೀನು ಹೊಂದಿದ ಕೃಷಿಕರಿಗೆ ಈ ಯೋಜನೆ ಲಾಭ ಸಿಗಲಿದೆ. ಈಗಾಗಲೇ ಸುತ್ತಮುತ್ತಲಿನ ಕೈಗಾರಿಕೆಗಳಿಂದ ಬಡುಗಡೆಯಾಗುವ ಕಲುಷಿತ ನೀರು ಮತ್ತು ರಾಸಾಯನಿಕ ತ್ಯಾಜ್ಯಗಳಿಂದ ಗಂಗಾ ನದಿ ಕಲುಷಿತಗೊಂಡಿದೆ. ಆದನ್ನು ನೈಸರ್ಗಿಕೀಕರಣಕ್ಕಾಗಿ ಕೇಂದ್ರ ಸರ್ಕಾರ ಈಗಾಗಲೇ ಸ್ವಚ್ಛ ಗಂಗಾ ಯೋಜನೆ ಕೈಗೊಂಡಿದೆ. ಇದೀಗ ನೈಸರ್ಗಿಕ ಕೃಷಿಮೂಲಕ ಗಂಗಾ ನದಿಯ ಪುನಶ್ಚೇತನಕ್ಕೆ ಮತ್ತೊಂದು ಕ್ರಮ ಕೈಗೊಂಡಂತಾಗಿದೆ. ನೈಸರ್ಗಿಕ ಕೃಷಿಯಲ್ಲಿ ಬೆಳೆಯಲಾಗುವ ಬೆಳೆಗಳಿಗೆ ಯಾವುದೇ ರಾಸಾಯನಿಕ ಮತ್ತು ರಸಗೊಬ್ಬರಗಳನ್ನು ಬಳಸುವುದಿಲ್ಲ. ಬದಲಿಗೆ ನೈಸರ್ಗಿಕವಾದ ಗೋಮೂತ್ರವನ್ನು ಬಳಸಿ ಕೃಷಿ ಮಾಡಲಾಗುತ್ತದೆ. ಇದರಿಂದ ಮಣ್ಣಿನ ಫಲವತ್ತತೆ ಮತ್ತು ಫಸಲು ಸಹ ಉತ್ತಮವಾಗಿರಲಿದೆ.



ಕೃಷ್ಣಾ-ಗೋದಾವರಿ ಜೋಡಣೆ ಹೊಸ ನೀರಾವರಿ ಸಮಸ್ಯೆಗೆ ದಾರಿ?

**ಆಂಧ್ರ, ತೆಲಂಗಾಣ ಕೃಷ್ಣೆಯ

Some hits and misses for Indian agriculture



By Invitation
Shwetha Saini

The budget has come at a critical time. 2022-23 is the year by which PM Modi has promised to deliver doubled incomes to Indian farmers. So, hopes and expectations were high about big-ticket programmes and schemes targeted at delivering on the promise. Alas, there was no mention of the 'doubling income' in Finance Minister (FM) Nirmala Sitharaman's budget speech. However, a renewed vision has been presented to the country by the FM who sought "to lay the foundation and give a blueprint to steer the economy over the Amrit Kaal of the next 25 years – from India at 75 to India at 100."

Of the total budget of Rs 1.24 lakh crore of Department of Agriculture and Farmers' Welfare, about 83% is budgeted for three programmes/schemes: (i) crop insurance or Pradhan Mantri Fasal Bima Yojana (PMFBY) (about 13%); (ii) interest subsidy for short term credit (about 16%) and (iii)PM Kisan (about 55%). The remaining about 17% of the department's budget is to be used for undertaking activities to support agriculture.

Of this 17% (or Rs 21,000 crore), about half (Rs 10, 433 crore) is earmarked for Rashtriya Krishi Vikas Yojna (RKVY). RKVY is a 2007-08 scheme launched by the previous government. This scheme offers greater autonomy to state governments to plan and prioritise how they want to use resources under this scheme.

States draw plans based on their specific priorities, local issues and challenges, taking their agro-climatic conditions, natural resource challenges



and infrastructural deficits and priorities into account.

Overtime, budgetary allocations under this scheme have been falling. However, this year, RKVY allocation has been increased by more than 5-fold, from Rs 2,000 crore (RE2021-22) to Rs 10,433 crore. This is a good step as it makes available a greater quantum of scheme funds for states to tap to take their agricultural reforms and growth forward. The focus on using technology like drones for crop assessment, digitisation of land records, spraying of insecticides, and nutrients is a welcome step towards digitalising the sector.

The FM has also shared her vision of delivering digital and high-tech services to farmers. Syncing startups with FPOs is another step in bringing technology closer to farmers. The renewed focus on nutrition along with food security is a welcome step.

Some misses include a 25% reduction in the MGNREGA scheme allocation and a reduction in the government's crop insurance scheme. The budgetary allocation for formation and promotion of FPOs has fallen by little less than a third. Centrality of Indian farmers and farming continues to be stronger than ever. Even though the dream of doubling incomes finds no mention in the current budget speech, the schemes and programmes appear well conceived and we pray they deliver to empower our farmers.

(The writer is a senior visiting fellow, ICRIER, New Delhi)

ಕನಿಷ್ಠ ಬೆಂಬಲ ಬೆಲೆಯಲ್ಲಿ 163ಲಕ್ಷ ರೈತರಿಂದ 1,208ಲಕ್ಷ ಟನ್‌ಗಳಷ್ಟು ಬತ್ತ ಮತ್ತು ಗೋದಿಯನ್ನು ಖರೀದಿಸಿ ರೈತರ ಖಾತೆಗಳಿಗೆ ನೇರವಾಗಿ 2.37ಲ.ಕೋ.ರೂ. ಪಾವತಿ । ಪರಿಶಿಷ್ಟ ವರ್ಗ, ಪಂಗಡದ ರೈತರಿಗೆ ವಿಶೇಷ ಆರ್ಥಿಕ ನೆರವು । ಮುಂದಿನ ಹಣಕಾಸು ವರ್ಷಕ್ಕಾಗಿ ಸರಕಾರ ಪಿಎಂ ಕಿಸಾನ್‌ಗಾಗಿ 6,75,000ಕೋ.ರೂ.ಅನುದಾನ । ಬೆಳೆ ವಿಮಾ ಯೋಜನೆಗೆ 15,500ಕೋ.ರೂ

ಕೃಷಿಗೆ 1.32 ಲಕ್ಷ ಕೋಟಿ ರೂ. ಮಿಷಿ

ಈ ಬಾರಿಯ ಕೇಂದ್ರ ಬಜೆಟಿನಲ್ಲಿ ಸಚಿವೆ ನಿರ್ಮಲಾ ಸೀತಾರಾಮನ್ ಅವರು, ಕೃಷಿ ಕ್ಷೇತ್ರದ ಆಧುನೀಕರಣ, ಬಲವರ್ಧನೆಗೆ ವಿಶೇಷ ಆದ್ಯತೆ ನೀಡಿದ್ದು, ಮೋದಿ ಸರಕಾರ ಕನಿಷ್ಠ ಬೆಂಬಲ ಬೆಲೆ (ಎಂಎಸ್ ಪಿ) ಯೋಜನೆಯನ್ವಯ ಗೋದಿ ಹಾಗೂ ಭತ್ತದ ಖರೀದಿಗೆ 2.37 ಲ.ಕೋ.ರೂ. ಗಳನ್ನು ಪಾವತಿಸಿದೆ ಎಂದು ತಿಳಿಸಿದ್ದಾರೆ. ಹಾಗೆಯೇ ಕೃಷಿಗೆ ಸಂಯೋಜಿತವಾಗಿರುವ ಆಹಾರ ಸಂಸ್ಕರಣೆ ಕ್ಷೇತ್ರಕ್ಕೂ ಭಾರೀ ಬಲ ತುಂಬುವ ಕ್ರಮಗಳನ್ನು ಪ್ರಕಟಿಸಲಾಗಿದ್ದು, 2022-23ನೇ ವರ್ಷವನ್ನು 'ಅಂತಾರಾಷ್ಟ್ರೀಯ ಸಿರಿಧಾನ್ಯಗಳ ವರ್ಷ'ವೆಂದು ಕೇಂದ್ರ ಘೋಷಿಸಿದೆ. ರೈತರಿಗೆ ತಮ್ಮ ಆದಾಯ ಹೆಚ್ಚಿಸಿಕೊಳ್ಳುವ ನಿಟ್ಟಿನಲ್ಲಿ ಈ ಕ್ರಮಗಳು ವೇಗವರ್ಧಕಗಳಾಗಿ ಕೆಲಸ ಮಾಡಲಿವೆ.

ಈ ಬಾರಿ ಕೃಷಿ ಮತ್ತು ರೈತರ ಕಲ್ಯಾಣ ಸಚಿವಾಲಯಕ್ಕೆ ಅನುದಾನವನ್ನು ಗಣನೀಯ ಪ್ರಮಾಣದಲ್ಲಿ ಅಂದರೆ ಶೇ.4.5ರಷ್ಟು ಹೆಚ್ಚಿಸಲಾಗಿದ್ದು, 2022-23ನೇ ಸಾಲಿಗೆ 1,32,513ಕೋ.ರೂ.ಗಳಿಗೆ ಏರಿಸಲಾಗಿದೆ.ಕನಿಷ್ಠ ಬೆಂಬಲ ಬೆಲೆಯಡಿ 163ಲಕ್ಷ ರೈತರಿಂದ 1,208ಲಕ್ಷ ಟನ್‌ಗಳಷ್ಟು ಬತ್ತ ಮತ್ತು ಗೋದಿಯನ್ನು ಖರೀದಿಸಿ ರೈತರ ಖಾತೆಗಳಿಗೆ ನೇರವಾಗಿ 2.37ಲ.ಕೋ.ರೂ.ಗಳನ್ನು ಪಾವತಿಸಲಾಗಿದೆ.

ವಿವಿ ಪಥ್ಯಕ್ರಮಕ್ಕೆ ಸೇರ್ಪಡೆ

ನೈಸರ್ಗಿಕ ಕೃಷಿ, ಶೂನ್ಯ ಬಂಡವಾಳದ ಕೃಷಿ, ಸಾವಯವ ಕೃಷಿ, ಆಧುನಿಕ ಕೃಷಿ, ಮೌಲ್ಯ ವರ್ಧನೆ ಹಾಗೂ ನಿರ್ವಹಣೆಯ ಅಗತ್ಯತೆಗಳಿಗೆ ಅನುಗುಣವಾಗಿ ಕೃಷಿ ವಿವಿಗಳಲ್ಲಿ ಪಥ್ಯ ಕ್ರಮಗಳನ್ನು ಬದಲಾವಣೆ ಮಾಡುವುದಕ್ಕೆ ರಾಜ್ಯಗಳಿಗೆ ಉತ್ತೇಜನ ನೀಡಲಾಗುವುದು ಎಂದರು. ಪರಿಶಿಷ್ಟ ವರ್ಗ, ಪಂಗಡದ ರೈತರಿಗೆ ವಿಶೇಷ ಆರ್ಥಿಕ ನೆರವು, ಆಗ್ರೋ ಫಾರೆಸ್ಟ್ರಿ, ಖಾಸಗಿ ಫೋರೆಸ್ಟ್ರಿಯನ್ನು ಉತ್ತೇಜಿಸಲು ಕಾನೂನಿನಲ್ಲಿ ಬದಲಾವಣೆಯಂತಹ ಕ್ರಮಗಳ ಬಗ್ಗೂ ತಿಳಿಸಲಾಗಿದೆ.



ಪಿಎಂ ಕಿಸಾನ್‌ಗೆ 6,75,000 ಕೋ.ರೂ.



ಮುಂದಿನ ಹಣಕಾಸು ವರ್ಷಕ್ಕಾಗಿ ಸರಕಾರ ಪಿಎಂ ಕಿಸಾನ್‌ಗಾಗಿ 6,75,000ಕೋ.ರೂ.ಅನುದಾನ ಒದಗಿಸಲಾಗಿದ್ದರೆ, ಬೆಳೆ ವಿಮಾ ಯೋಜನೆಗೆ 15,500ಕೋ.ರೂ., ಕೃಷಿಯೋನ್ನತಿ ಯೋಜನೆಗೆ 7,183ಕೋ.ರೂ., ರಾಷ್ಟ್ರೀಯ ಕೃಷಿ ವಿಕಾಸ್ ಯೋಜನೆ (ಆರ್‌ಕೆವಿವೈ)ಗೆ 10,433ಕೋ.ರೂ.,ಮಾರುಕಟ್ಟೆ ಮಧ್ಯಪ್ರವೇಶ ಯೋಜನೆ-ಬೆಂಬಲ ಬೆಲೆ ಯೋಜನೆಗೆ 1,500ಕೋ.ರೂ.ಒದಗಿಸಲಾಗಿದೆ.ಸಿರಿಧಾನ್ಯ ಉತ್ಪಾದನೆಗೆ ವಿಶೇಷ ಬೆಂಬಲ ಘೋಷಿಸಲಾಗಿದ್ದು, ಕೊಯ್ಲೋತ್ತರ ಬೆಂಬಲ ಮತ್ತು ಸಿರಿಧಾನ್ಯ ಉತ್ಪನ್ನಗಳ ಆಂತರಿಕ ಬಳಕೆಗೆ ಒತ್ತು ನೀಡಲಾಗಿದೆ. ಕಿಸಾನ್ ಡ್ರೋನ್, ರಾಸಾಯನಿಕ ಮುಕ್ತ ಕೃಷಿಗೆ ಉತ್ತೇಜನ, ಸಾರ್ವಜನಿಕ-ಖಾಸಗಿ ಸಹಭಾಗಿತ್ವಕ್ಕೆ ಪ್ರೋತ್ಸಾಹ, ಉನ್ನತ ತಂತ್ರಜ್ಞಾನ ಈ ನಾಲ್ಕು ಅಂಶಗಳ ಮೂಲಕ ದೇಶದ ರೈತರ ಆದಾಯವನ್ನು ದ್ವಿಗುಣಗೊಳಿಸುವ ಮತ್ತು ಆರೋಗ್ಯಕರ ಆಹಾರ ಬೆಳೆ ಬೆಳೆಯುವುದಕ್ಕೆ ಬೆಂಬಲದಂತಹ ಪ್ರಮುಖ ಕ್ರಮಗಳನ್ನು ಘೋಷಿಸಲಾಗಿದೆ. ಭೂ ದಾಖಲೆಗಳ ಡಿಜಿಟಲೀಕರಣ ಮಾಡುವುದರ ಜೊತೆಗೆ ಕೀಟನಾಶಕಗಳ ಸಿಂಪರಣೆಯನ್ನೂ ಆಧುನೀಕರಣಗೊಳಿಸಲಾಗುವುದು.

ಮೀನುಗಾರಿಕೆ, ಹೈನುಗಾರಿಕೆ, ಆಹಾರ ಸಂಸ್ಕರಣೆಗೆ ಬಲ

ಸರಕಾರ ಕೃಷಿಯ ಜೊತೆಗೆ ಕೃಷಿಗೆ ಪೂರಕವಾಗಿರುವ ಹೈನುಗಾರಿಕೆ, ಪಶುಸಂಗೋಪನೆ, ಮೀನುಗಾರಿಕೆ ಕ್ಷೇತ್ರಗಳಿಗೆ ನೀಡಲಾಗುವ ಅನುದಾನವನ್ನು ಶೇ.44ರಷ್ಟು ಭಾರೀ ಪ್ರಮಾಣದಲ್ಲಿ ಹೆಚ್ಚಿಸಿದೆ. ಈ ಮೂಲಕ ಈ ಕ್ಷೇತ್ರಗಳಿಗೆ 6,407.31ಕೋ.ರೂ.ಗಳನ್ನು ನೀಡಲಾಗಿದ್ದರೆ, ಆಹಾರ ಸಂಸ್ಕರಣೆ ಉದ್ಯಮ ಕ್ಷೇತ್ರಕ್ಕೆ ಎರಡೂವರೆ ಪಟ್ಟು ಅಧಿಕ ಅಂದರೆ 2,941.99ಕೋ.ರೂ.ಗಳನ್ನು ನೀಡಲಾಗಿದೆ. ಇದಲ್ಲದೆ ಸಮಗ್ರ ಅಭಿವೃದ್ಧಿಯ ಭಾಗವಾಗಿ ಸರಕಾರವು ಆಂತರಿಕ ಖಾದ್ಯ ತೈಲ ಉತ್ಪಾದನೆಗೆ ಸಮಗ್ರ ಯೋಜನೆಯೊಂದನ್ನು ರೂಪಿಸಿದೆ. ಇದು ದೇಶದ ಖಾದ್ಯತೈಲಗಳ ಆಮದು ಅವಲಂಬನೆಯನ್ನು ಕಡಿಮೆ ಮಾಡುವ ಉದ್ದೇಶ ಹೊಂದಿದೆ.



ರೈತ ಕೇಂದ್ರಿತ ಕಾರಿಡಾರ್‌ಗಳ ಸ್ಥಾಪನೆ

ಕೃಷಿ ಸಂಬಂಧಿತ ಸ್ಟಾರ್ಟ್ ಅಪ್ ಹಾಗೂ ಗ್ರಾಮೀಣ ಉದ್ದಿಮೆಗಳಿಗೆ ನಬಾರ್ಡ್ ಮೂಲಕ ಆರ್ಥಿಕ ನೆರವು ನೀಡುವುದಕ್ಕಾಗಿ ಮಿಶ್ರ ಬಂಡವಾಳವನ್ನೊಳಗೊಂಡ ನಿಧಿಯೊಂದನ್ನು ಸರ್ಕಾರ ಸ್ಥಾಪಿಸುವುದಾಗಿ ಪ್ರಕಟಿಸಿದ ಸಚಿವರು, ರೈತ-ಉತ್ಪಾದಕರ ಸಂಸ್ಥೆ (ಇಪಿಒ)ಗಳಿಗೆ ಆಂತರ-ಪ್ರದೇಶ ಬೆಂಬಲ, ರೈತರಿಗೆ ಬಾಡಿಗೆ ಆಧಾರದಲ್ಲಿ ಯಂತ್ರಗಳನ್ನು ನೀಡುವುದು ಈ ಸ್ಟಾರ್ಟ್ ಅಪ್‌ಗಳ ಚಟುವಟಿಕೆಗಳಾಗಿರಲಿವೆ. ಇದರ ಜೊತೆ ಜೊತೆಯಲ್ಲೇ ದೇಶಾದ್ಯಂತ ರಾಸಾಯನಿಕ ಮುಕ್ತ ನೈಸರ್ಗಿಕ ಕೃಷಿಗೆ ಉತ್ತೇಜನ ನೀಡಲಾಗುತ್ತದೆ. ಮೊದಲ ಹಂತದಲ್ಲಿ ಗಂಗಾ ನದಿಯ ಪ್ರದೇಶದಲ್ಲಿ 5ಕಿ.ಮೀ.ವಿಸ್ತಾರದ ಕಾರಿಡಾರ್‌ಗಳನ್ನು ಸ್ಥಾಪಿಸುವ ಮೂಲಕ ಈ ಯೋಜನೆ ಜಾರಿಗೆ ಬರಲಿದೆ ಎಂದು ಸೀತಾರಾಮನ್ ವಿವರಿಸಿದ್ದಾರೆ.

ವಿವಿಧ ಆಯಾಮಗಳನ್ನು ಬಿಡದ ಬಜೆಟ್ | ₹4,33,108 ಕೋಟಿ ಮೀಸಲು

ರಸಗೊಬ್ಬರ, ಪೆಟ್ರೋಲಿಯಂಗೆ ಸಬ್ಸಿಡಿ

- ಪ್ರಸಕ್ತ ಹಣಕಾಸು ವರ್ಷದಲ್ಲಿ ರಸಗೊಬ್ಬರ ಮೇಲಿನ ಸಬ್ಸಿಡಿ ಪ್ರಮಾಣ 1,27,922ಕೋ.ರೂ.ಗಳಿಂದ 1,40,122ಕೋ.ರೂ.ಗಳಿಗೆ ನೆಗೆಯಲಿದೆ.
- ನೈಸರ್ಗಿಕ ಕೃಷಿಗೆ ಭಾರೀ ಉತ್ತೇಜನ ನೀಡಲೂ ಕೇಂದ್ರ ನಿರ್ಧಾರ

ಪ್ರಸಕ್ತ ಹಣಕಾಸು ವರ್ಷದ ಬಜೆಟ್‌ನಲ್ಲಿ ಆಹಾರ, ರಸಗೊಬ್ಬರ ಮತ್ತು ಪೆಟ್ರೋಲಿಯಂ ಮೇಲಿನ ಸಬ್ಸಿಡಿ ಮೊತ್ತವನ್ನು 4,33,108ಕೋ.ರೂ. ಗಳಿಗೆ ನಿಗದಿಪಡಿಸಲಾಗಿದೆ.ಸರಕಾರ ಸಬ್ಸಿಡಿಗಳ ಹೊರೆಯನ್ನು ತಗ್ಗಿಸುವತ್ತ ಚಿಂತನೆ ನಡೆಸಿದೆ.

2021-22ನೇ ಹಣಕಾಸು ವರ್ಷದ ಪರಿಷ್ಕೃತ ಬಜೆಟ್ ಅಂದಾಜಿನಂತೆ, ಒಟ್ಟು ಸಬ್ಸಿಡಿ ಮೊತ್ತ 4,33,108ಕೋ.ರೂ.(ಶೇ.39ರಷ್ಟು ಇಳಿಕೆ)ಗಳಿಂದು ಸರಕಾರ ನಿಗದಿಪಡಿಸಿದೆ.ಮುಂದಿನ ಸಾಲಿನಲ್ಲಿ ಈ ಸಬ್ಸಿಡಿಗಳು ಇನ್ನಷ್ಟು ಇಳಿಕೆಯಾಗಿ 3,17,866ಕೋ.ರೂ.ಗಳಿಗೆ (ಶೇ.27ಕ್ಕೆ ತಗ್ಗಲಿದೆ) ತಲುಪಲಿದೆ.



ಪ್ರಸಕ್ತ ಹಣಕಾಸು ವರ್ಷದಲ್ಲಿ ಆಹಾರ ರಂಗ ಮೇಲಿನ ಸಬ್ಸಿಡಿ 2,86,469ಕೋ.ರೂ.ಗಳಷ್ಟು ಹೆಚ್ಚಲಿದೆ. ಪೆಟ್ರೋಲಿಯಂ ಮೇಲಿನ ಸಬ್ಸಿಡಿ 6,517ಕೋ.ರೂ.ಗಳಿಗೆ ಇಳಿಯಲಿದೆ ಎಂದು ಪ್ರಕಟಿಸಲಾಗಿದೆ.

ಪ್ರಸಕ್ತ ಹಣಕಾಸು ವರ್ಷದಲ್ಲಿ ರಸಗೊಬ್ಬರ ಮೇಲಿನ ಸಬ್ಸಿಡಿ ಪ್ರಮಾಣ 1,27,922ಕೋ.ರೂ.ಗಳಿಂದ 1,40,122ಕೋ.ರೂ.ಗಳಿಗೆ ನೆಗೆಯಲಿದೆ. ಮುಂದಿನ 2022-23ನೇ ಹಣಕಾಸು ವರ್ಷದಲ್ಲಿ ಇದನ್ನು 1,05,222ಕೋ.ರೂ.ಗಳಿಗೆ ತಗ್ಗಿಸಲು ಚಿಂತನೆ ನಡೆಸಲಾಗಿದೆ. ಇದೇ ವೇಳೆ ದೇಶದಲ್ಲಿ ಸಾವಯವ, ನೈಸರ್ಗಿಕ ಕೃಷಿಗೆ ಭಾರೀ ಉತ್ತೇಜನ ನೀಡಲೂ ಕೇಂದ್ರ ಸರಕಾರ ನಿರ್ಧರಿಸಿರುವುದು ಗಮನಾರ್ಹವಾಗಿದೆ.

ಆಹಾರ ಸಬ್ಸಿಡಿಯನ್ನು 2,86,469ಕೋ.ರೂ.ಗಳಿಂದ 2,06,831ಕೋ.ರೂ.ಗಳಿಗೆ ಇಳಿಸಲು ಚಿಂತನೆ ನಡೆದಿದೆ. ಕಳೆದ ಸಾಲಿನಲ್ಲಿ ಕೋವಿಡ್ ಬಿಕ್ಕಟ್ಟಿನ ಹಿನ್ನೆಲೆಯಲ್ಲಿ ಆಹಾರ ಸಬ್ಸಿಡಿಗೆ ಭಾರೀ ಮೊತ್ತವನ್ನು ಕೇಂದ್ರ ಸರಕಾರ ವ್ಯಯಿಸಬೇಕಾಗಿ ಬಂದಿತ್ತು ಎಂಬುದಿಲ್ಲಿ ಉಲ್ಲೇಖನೀಯ. ಇದೇ ರೀತಿ ಪೆಟ್ರೋಲಿಯಂ ಸಬ್ಸಿಡಿಯನ್ನು 6,517ಕೋ.ರೂ.ಗಳಿಂದ 5,813ಕೋ.ರೂ.ಗಳಿಗೆ ಇಳಿಸಲು ಚಿಂತನೆ ನಡೆಸಲಾಗಿದೆ.